

# ದಿ ಕ್ರಿಸ್ಟಡೆಲ್ಫಿಯನ್ಸ್

(ಕ್ರಿಸ್ತನಲ್ಲಿ ಸಹೋದರ, ಸಹೋದರಿಯರು)

ಸತ್ಯವೇದ ಆಧಾರಿತ ಸಮಾಜದ ಪರಿಚಯ

ಮೂಲ : ರಾಬ್ ಹೈಂಡ್ಮನ್

# ದ ಕ್ರಿಸ್ಟಡೆಲ್ಫಿಯನ್ಸ್
## (ಕ್ರಿಸ್ತನಲ್ಲಿ ಸಹೋದರ, ಸಹೋದರಿಯರು)

## ಸತ್ಯವೇದ ಆಧಾರಿತ ಸಮಾಜದ ಪರಿಚಯ

ಮೂಲ: ರಾಬ್ ಹೈಂಡ್ಮನ್.

The Communications and Literature requests from Readers in Karnataka, Kerala & Tamilnadu:

**The Christadelphians,**
P.O. Box 535, Frazer Town,
Bangalore - 560005. INDIA.

**Elsewhere in India:**

**The Christadelphians,**
G..P.O. Box 159,
Hyderabad, A.P. 500001.
INDIA.

# ದ ಕ್ರಿಸ್ಟಡೆಲ್ಫಿಯನ್ಸ್
## (ಕ್ರಿಸ್ತನಲ್ಲಿ ಸಹೋದರ, ಸಹೋದರಿಯರು)
## ಸತ್ಯವೇದ ಆಧಾರಿತ ಸಮಾಜದ ಪರಿಚಯ.

ಕ್ರಿಸ್ಟಡೆಲ್ಫಿಯನ್ನರು ಒಂದು ಸಣ್ಣ ಧಾರ್ಮಿಕ ಗುಂಪಾಗಿದ್ದು ಸತ್ಯವೇದದ ಹೊಸ ಒಡಂಬಡಿಕೆಯ ಕಾಲದಲ್ಲಿ ಸ್ಥಾಪಿತವಾದ ಆದಿಕ್ರೈಸ್ತ ಸಭೆಯ ನಂಬಿಕೆ ಮತ್ತು ಗುಣಗಳನ್ನು ಅಳವಡಿಸಿಕೊಂಡು ಅದರಂತೆ ನಡೆಯಲು ಪ್ರಯತ್ನಿಸಿತ್ತಿರುವ ಸಮೂಹವಾಗಿದೆ.

ಕ್ರಿಸ್ಟಡೆಲ್ಫಿಯನ್ಸ್ ಎಂಬ ಹೆಸರನ್ನು ಸುಮಾರು 150 ವರ್ಷಗಳಷ್ಟು ಹಿಂದಿನಿಂದಲೂ ಬಳಸಲಾಗುತ್ತಿದೆ. ಈ ಹೆಸರು ಗ್ರೀಕ್ ಭಾಷೆಯ ಎರಡು ಪದಗಳಿಂದ ಕೂಡಿದ್ದು ಅದರ ಅರ್ಥ "ಕ್ರಿಸ್ತನಲ್ಲಿ ಸಹೋದರ ಸಹೋದರಿಯರು" ಅಥವಾ" ಕ್ರಿಸ್ತನಲ್ಲಿರುವ ನಂಬಿಕಸ್ತರಾದ ಸಹೋದರರು" ಎಂದಾಗಿದೆ.

( ಮತ್ತಾಯ 23:8, ಕೊಲೊಸ್ಸೆ 1:2, ಮತ್ತು ಇಬ್ರಿಯ 2:11 ನೋಡಿ).

ನಾವುಗಳು ಪ್ರಪಂಚದಾದ್ಯಂತ ಸುಮಾರು 120 ದೇಶಗಳಲ್ಲಿ ಇದ್ದೇವೆ. ಕ್ರೈಸ್ತ ಸಹೋದರರ ದೊಡ್ಡ ಸಭೆಗಳು ಇಂಗ್ಲೆಡ್, ಅಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಉತ್ತರ ಅಮೆರಿಕಾ, ಭಾರತ, ಏಷ್ಯಾ ಖಂಡದ ಇತರ ದೇಶಗಳು ಮತ್ತು ಅಫ್ರಿಕಾ ಖಂಡದ ಹಲವಾರು ದೇಶಗಳಲ್ಲಿವೆ. ಹೇಗೆ ಪ್ರಾರಂಭದ ಕ್ರಿಸ್ತನ ಹಿಂಬಾಲಕರು(ಕ್ರೈಸ್ತರು) ಮನೆಗಳಲ್ಲಿ, ಬಾಡಿಗೆಯ ಕೊಠಡಿಗಳಲ್ಲಿ ಮತ್ತು ಕೆಲವೊಮ್ಮೆ ಸ್ವಂತ ಕೊಠಡಿಗಳಲ್ಲಿ ಸಭೆ ಸೇರುತ್ತಿದ್ದರೋ ಅದೇರೀತಿ ನಾವು ಸಹ ಸಭೆ ಸೇರುತ್ತೇವೆ.

(ಅ.ಕೃ.1:13–14, 2:46–47, 19:9, 28:30 ನೋಡಿ).

ನಾವು ಮೊದಲ ಶತಮಾನದ ಕ್ರೈಸ್ತ ಸಭೆಯನ್ನು ಮಾದರಿ

ಮಾಡಿಕೊಂಡ ಸಮೂಹವಾಗಿದ್ದೇವೆ. ನಾವು ಒಟ್ಟಾಗಿ ಸೇರುವ ಗುಂಪನ್ನು "ಸಭೆ" (ಎಕ್ಲೇಷಿಯಾ) ಎಂದು ಕರೆಯಲಾಗುತ್ತದೆ (ಈ ಪದವು ಹೊಸ ಒಡಂಬಡಿಕೆಯ ಗ್ರೀಕ್ ಭಾಷಾಂತರದಲ್ಲಿ ಚರ್ಚ್ ಎಂದು ಇದೆ). ನಮಗೆ ಯಾವುದೇ ವೇತನ ಪಾದ್ರಿಗಳಿಲ್ಲ ಮತ್ತು ಯಾವುದೇ ಅಂತಸ್ತುಗಳನ್ನು ಹೊಂದಿರುವ ಅಧಿಕಾರಿಗಳಿಲ್ಲ. ನಮ್ಮ ಸಭೆಯು ಸದಸ್ಯರುಗಳನ್ನು ಸಹೋದರರು ಅಥವಾ ಸಹೋದರಿಯರು ಎಂದು ಕರೆಯುತ್ತೇವೆ ಮತ್ತು ಎಲ್ಲರೂ ಸಭೆಯ ಎಲ್ಲಾ ಚಟುವಟಿಕೆಗಳಲ್ಲಿ ಪಾಲುಗಾರರಾಗಿರುತ್ತಾರೆ. ಎಲ್ಲಾ ಸದಸ್ಯರು ತಮ್ಮ ಸಮಯ, ಮತ್ತು ಕೆಲಸವನ್ನು ದೇವರ ಸೇವೆಗೆ ಸ್ವ ಇಚ್ಛೆಯಿಂದ ಮಾಡುವವರಾಗಿದ್ದಾರೆ. ನಮ್ಮಲ್ಲಿ ಒಂದೇ ಧೃಢವಾದ ನಂಬಿಕೆ ಇದ್ದು ಇದು ವಿಶ್ವಾಸದಿಂದ ಇರುವ ಸಹೋದರತ್ವವನ್ನು ಬಲಪಡಿಸಲು ಸಹಕಾರಿಯಾಗಿದೆ.
(ರೋಮಾ 12:4–8, 1ಕೊರಿಂಥ 12:4–27, ಗಲಾತ್ಯ 3:28 ನೋಡಿ).

ನಾವು ಸತ್ಯವೇದವು(ದ ಬೈಬಲ್) ದೇವರ ಪ್ರೇರಣೆಯಿಂದ ಬರೆಯಲ್ಪಟ್ಟಿರುವ ಗ್ರಂಥವಾಗಿದೆ ಮತ್ತು ನಮಗೆ ಮಾರ್ಗದರ್ಶನ ನೀಡುವ ಏಕೈಕ ಗ್ರಂಥವಾಗಿದೆ ಎಂದು ಅಂಗೀಕರಿಸಿ ನಂಬುತ್ತೇವೆ. ನಮ್ಮಲ್ಲಿ ಸಹೋದರರಾಗಿ ಸೇರಬೇಕಾದರೆ ದೀಕ್ಷಾಸ್ನಾನದ(ನೀರಿನಲ್ಲಿ ಸಂಪೂರ್ಣವಾಗಿ ಮುಳುಗೇಳುವುದರ) ಮೂಲಕ ಕ್ರಿಸ್ತ ನಂಬಿಕೆಗೆ ಬರಬೇಕಾಗುತ್ತದೆ.

## *ಸಂಕ್ಷಿಪ್ತ ಇತಿಹಾಸ:*

ಕ್ರಿಸ್ಟಡೆಲ್ಫಿಯನ್ನರು ಅಪೋಸ್ತಲರು ಹೊಂದಿದ್ದಂತಹ ಒಂದೇ ವಿಶ್ವಾಸ ಮತ್ತು ನಂಬಿಕೆಯನ್ನು ಹೊಂದಿರುವಂತವರಾಗಿದ್ದಾರೆ. ಪ್ರಪಂಚದಾದ್ಯಂತ ಹಲವಾರು ಅಂದರೆ, ಬೇರೆ ಗುಂಪುಗಳು

ಸತ್ಯವೇದವನ್ನು ಓದಿ ಅರ್ಥಮಾಡಿಕೊಂಡು ಅದರ ಬೋಧನೆಗಳು ಸರಳವಾಗಿರುವುದನ್ನು ಒಪ್ಪಿಕೊಂಡಿದ್ದಾರೆ.

ಕ್ರಿಸ್ಟಡೆಲ್ಫಿಯನ್ನರ ನಂಬಿಕೆ ಮತ್ತು ನಡುವಳಿಕೆಗಳು ಹೊಸ ಒಡಂಬಡಿಕೆಯ ಪ್ರಾರಂಭದ ಕ್ರೈಸ್ತರ ಮತ್ತು ಒಂದು ಮತ್ತು ಎರಡನೆಯ ಶತಮಾನದ ದಾಖಲೆಗಳ, ಅಂದರೆ ಅಪೋಸ್ತಲರ ಬೋಧನೆ ಮತ್ತು ಪತ್ರಿಕೆಗಳ ಆಧಾರದಂತೆ ನಡೆಯುವವರಾಗಿದ್ದಾರೆ.

ಯೂರೋಪ್ ಖಂಡದಲ್ಲಿ 16ನೇ ಶತಮಾನದಲ್ಲಿ ಧಾರ್ಮಿಕ ಸುಧಾರಣೆಯಾದ ನಂತರ, ಸತ್ಯವೇದದಲ್ಲಿ ಇರುವ ವಿಷಯಗಳನ್ನು ಮತ್ತೆ ಶೋಧನೆ ಮಾಡಿ ಹಲವಾರು ಗುಂಪುಗಳು ಸತ್ಯವನ್ನು ಕಂಡುಕೊಂಡವು. ಅವುಗಳೆಂದರೆ ಸ್ವಿಸ್ ಅನಾಬ್ಯಾಪಿಸ್ಟ್, ಪೋಲಿಷ್ ಸೋಸಿನಿಯನ್ಸ್, ಪ್ರಾರಂಭದ ಇಂಗ್ಲೀಷ್ ಬ್ಯಾಪಿಸ್ಟ್ ಇವರೆಲ್ಲರೂ ಸಮಾನವಾದ ನಂಬಿಕೆಯನ್ನು ಪ್ರಾರಂಭದಲ್ಲಿ ಹೊಂದಿದ್ದರು(ಆದರೆ ಈಗ ಆ ಗುಂಪುಗಳು ಒಂದೇ ನಂಬಿಕೆಯನ್ನು ಹೊಂದಿಲ್ಲ). 18ನೇ ಶತಮಾನದಲ್ಲಿ ಅನೇಕ ಪ್ರಮುಖರು ಈ ನಂಬಿಕೆಯನ್ನು ಹೊಂದಿದ್ದರು ಅವುಗಳೆಂದರೆ, ಸರ್ ಐಸಾಕ ನ್ಯೂಟನ್, ಮತ್ತು ವಿಲ್ಲಿಯಂ ವಿಸ್ಟನ್ ಆಗಿದ್ದಾರೆ.

ಅಮೆರಿಕಾ ಮತ್ತು ಇಂಗ್ಲೆಂಡ್ ದೇಶಗಳಲ್ಲಿ 1830ರಲ್ಲಿ ಕ್ರಿಸ್ಟಡೆಲ್ಫಿಯನ್ಸ್ ಪ್ರಾರಂಭವಾಯಿತು. ಅಮೆರಿಕಾದ ವೈದ್ಯನಾದ ಸ॥ಜಾನ್ ಥಾಮಸ್ ಎಂಬುವರು "ಹೆರಾಲ್ಡ್ ಅಫ್ ಕಿಂಗ್‌ಡಮ್" ಎಂಬ ಪುಸ್ತಕವನ್ನು ಪ್ರಕಟಿಸಿದರು. ಈ ಪುಸ್ತಕವು ಪುನರುತ್ಥಾನ ಮತ್ತು ದೇವರ ರಾಜ್ಯವನ್ನು ಕುರಿತು ಸತ್ಯವೇದವನ್ನು ಆಧಾರ ಮಾಡಿಕೊಂಡು ತಿಳಿಸುವಂತದಾಗಿತ್ತು. ಅದೇ ಸಮಯಕ್ಕೆ ಇಂಗ್ಲೆಂಡ್ ದೇಶದಲ್ಲಿ ಸ॥ರಾಬರ್ಟ್ ರಾಬರ್ಟ್ಸ್ ಎಂಬ ಪತ್ರಕರ್ತ ಅದೇ ವಿಷಯದ ಮೇಲೆ "ಅಂಬಾಸಿಡರ್ ಆಫ್ ದ ಕಮಿಂಗ್ ಏಜ್"

ಎಂಬ ಪುಸ್ತಕವನ್ನು ಹೊರತಂದರು. ಥಾಮಸ್ ಮತ್ತು ರಾಬರ್ಟ್ಸ್‌ರವರು ಒಬ್ಬರನ್ನೊಬ್ಬರು ಮೊದಲು ಎಂದೂ ನೋಡಿರಲಿಲ್ಲ, ಪರಿಚಯವಿರಲಿಲ್ಲ, ಆದರೆ ಇವರಿಬ್ಬರಿಗೂ ಒಂದೇ ವಿಷಯದ ಬಗ್ಗೆ ಬರೆಯಲು ಹೇಗೆ ಸಾಧ್ಯವಾಯಿತು ಎಂಬುದನ್ನು ನೋಡುವಾಗ- ಇವರಿಬ್ಬರೂ ಸತ್ಯವೇದದ ನಿಜ ವಿಧ್ಯಾರ್ಥಿಗಳಾಗಿದ್ದದರಿಂದ ಈ ಕಾರ್ಯ ಸಾಧ್ಯವಾಯಿತು.

1861 ರಲ್ಲಿ ಅಮೆರಿಕಾದ ಅಂತರ್ಯುದ್ಧ ಮುಕ್ತಾಯವಾಯಿತು. ಆ ಸಂದರ್ಭದಲ್ಲಿ ಕೆಲವೊಂದು ಕ್ರೈಸ್ತ ಗುಂಪುಗಳು ಯುದ್ಧದಲ್ಲಿ ಭಾಗಿಯಾಗಿರಲಿಲ್ಲ. ಯಾರು ಆ ರೀತಿ ಯುದ್ಧದಲ್ಲಿ ಭಾಗಿಯಾಗಿರಲಿಲ್ಲವೋ ಅಂತಹ ಗುಂಪುಗಳು ಸರ್ಕಾರದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿದರು. ಆ ರೀತಿ ನೋಂದಾಯಿಸುವ ಸಂದರ್ಭದಲ್ಲಿ ಆಲ್ಗೆ ಕೌಂಟಿ ಪ್ರದೇಶದ ಸ್ಯಾಮ್ ಕಾಫ್ ಮನ್ ಮತ್ತು ಇತರೆ ಸಹೋದರರು "ಕ್ರೈಸ್ತ ಸಹೋದರರು" (ಬ್ರದರನ್ ಇನ್ ಕ್ರೈಸ್ಟ್) ಅಥವಾ "ಕ್ರಿಸ್ಟಡೆಲ್ಫಿಯನ್ಸ್" ಎಂಬ ಹೆಸರನ್ನು ನೊಂದಾಯಿಸಿದರು. ಬಹಳಬೇಗ ಈ ಹೆಸರನ್ನು ಸಮಾನ ಮನಸ್ಸನ್ನು ಹೊಂದಿದ್ದ ಅಮೆರಿಕಾ ಮತ್ತು ಇಂಗ್ಲೆಂಡ್ ದೇಶದ ಅನೇಕ ನಂಬಿಕಸ್ತರು ಇಟ್ಟುಕೊಂಡು ಕಾರ್ಯ ಪ್ರಾರಂಭಿಸಿದರು. ಅಲ್ಲಿಂದೀಚೆಗೆ ಕ್ರಿಸ್ಟಡೆಲ್ಫಿಯನ್ಸ್ ಸ್ವತಂತ್ರ ಗುಂಪಾಗಿದ್ದು ಪ್ರಪಂಚದಾದ್ಯಂತ ಬಹುಪಾಲು ಎಲ್ಲಾ ರಾಷ್ಟ್ರಗಳಲ್ಲಿ ಸ್ಥಾಪಿತಗೊಂಡಿತು.

ಈ ಪುಸ್ತಕದ ಮುಂದಿನ ಭಾಗದಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ವಿವರಣೆಗಳನ್ನೊಳಗೊಂಡಿದೆ.

1. ನಮ್ಮ ನಂಬಿಕೆಗಳು.
2. ನಮ್ಮ ಜೀವದ ಮಾರ್ಗ.
3. ನಮ್ಮ ಅನ್ಯೋನ್ಯತೆ, ಆರಾಧನೆ ಮತ್ತು ಸಾಕ್ಷಿ.

# 1.ನಮ್ಮ ನಂಬಿಕೆಗಳು

## *ಸತ್ಯವೇದ*

ದೇವರು ತನ್ನನ್ನು ಮಾನವರಿಗೆ ಸತ್ಯವೇದದ ಮೂಲಕ ಮಾತ್ರ ಪ್ರಕಟಪಡಿಸಿಕೊಂಡಿದ್ದಾನೆ. ಜೊತೆಗೆ ಪ್ರತಿಯೊಬ್ಬ ಮಾನವ, ದೇವರ ಮಗನಾದ ಯೇಸುವಿನ ಬಳಿಗೆ ಮತ್ತು ದೇವರ ಬಳಿಗೆ ಸತ್ಯವೇದದ ಮೂಲಕ ಬರಬೇಕಾಗಿದೆ. ನಮಗೆ ಸತ್ಯವೇದವೊಂದೇ ಆಧಾರವಾಗಿದ್ದು ಅದನ್ನು ಓದುವುದರ ಮೂಲಕ ಮತ್ತು ಬಹಳ ಎಚ್ಚರಿಕೆಯಿಂದ ನಮಗೆ ಸಿಗುವ ಎಲ್ಲಾ ಅವಕಾಶಗಳಲ್ಲಿ ಸತ್ಯವೇದವನ್ನು ತಿಳಿಯುವುದಕ್ಕೆ ಪ್ರಯತ್ನ ಪಡಬೇಕು.

(2ತಿಮೋತೆ 3:16–17, 1ಪೇತ್ರ 1:10–12, 2ಪೇತ್ರ 1:20–21, ಅ.ಕೃ. 17:11, ಎಫೆಸ 2:20, ರೋಮಾಪುರದವರಿಗೆ 16:26).

## *ದೇವರು*

ದೇವರು ಒಬ್ಬನೇ. ಒಬ್ಬನೇ ದೇವರಿದ್ದಾನೆ, ಆತ ಸರ್ವಶಕ್ತನೂ, ಅಮರತ್ವವುಳ್ಳವನೂ, ಸಕಲ ಸೃಷ್ಟಿಗೂ ಮೂಲಕಾರಣನಾಗಿದ್ದಾನೆ. ಯೇಸುಕ್ರಿಸ್ತ ದೇವರ ಒಬ್ಬನೇ ಮಗನಾಗಿದ್ದಾನೆ ಮತ್ತು ಪವಿತ್ರಾತ್ಮ ದೇವರ ಪವಿತ್ರ ಶಕ್ತಿಯಾಗಿದೆ.

(ಧ.ಕಾ. 6:4, ಲೂಕ1:35, ಅ.ಕೃ. 1:8, 1ಕೊರಿ 8:6, 1ತಿಮೋ 1:17, 2:5, 6:16).

## *ಮಾನವ*

ಮಾನವ ಮರ್ತ್ಯನಾಗಿದ್ದಾನೆ ಮತ್ತು ದೇವರ ಮುಂದೆ ಪಾಪಿಯಾಗಿದ್ದಾನೆ. ಮಾನವನ ಮನಸ್ಸು ಯಾವಾಗಲೂ ಪಾಪದ

ಕಡೆಗೆ ಒಲವು ತೋರಿಸುವಂತಹದ್ದು ಆಗಿದೆ, ಮತ್ತು ಪಾಪದ ಶಿಕ್ಷೆ ಮರಣವಾಗಿದೆ. ಅಂದರೆ ಜೀವಕ್ಕೆ ಕೊನೆಯಾಗುವಂತಹದಾಗಿದೆ.

(ಯೆರೆ 17:9, ಮಾರ್ಕ 7:21–23, ರೋಮಾ 3:23, ಯಾಕೋಬ1:13–15, ರೋಮಾ 6:23, ಪ್ರಸ 9:5,10, ಕೀರ್ತ 115:17, 146:4).

## *ನಂಬಿಕೆ ಮತ್ತು ನಿರೀಕ್ಷೆ*

ನಮ್ಮ ಒಂದೇ ನಂಬಿಕೆ ಮತ್ತು ನಿರೀಕ್ಷೆ ಎಂದರೆ, ನಮಗೆ ಮರಣ ಉಂಟಾದರೂ ಸಹ ದೇವರು ಯೇಸುಕ್ರಿಸ್ತನ ಮೂಲಕ ಪುನರುತ್ಥಾನವನ್ನು ಉಂಟುಮಾಡುತ್ತಾನೆ, ಮತ್ತು ಭೂಮಿಯ ಮೇಲೆ ಸ್ಥಾಪಿತವಾಗುವ ದೇವರ ರಾಜ್ಯದಲ್ಲಿ ನಿತ್ಯಜೀವವನ್ನು ಕೊಡುತ್ತಾನೆ ಎಂಬುದೇ ಆಗಿದೆ.

(ಕೀರ್ತ 49:12–20, ಯೊಹಾ 11:25–26, ಅ.ಕೃ. 24:15, ರೋಮಾ 8:22–39, 1ಕೊರಿ 15:12, ಪ್ರಕಟನೆ 5:10. 20:4).

## *ವಾಗ್ದಾನಗಳು*

ದೇವರು ಅಬ್ರಹಾಮ ಮತ್ತು ದಾವೀದನಿಗೆ ಹಳೆಯ ಒಡಂಬಡಿಕೆ ಕಾಲದಲ್ಲಿ ಮಾಡಿದ ವಾಗ್ದಾನಗಳಿಂದ ಸುವಾರ್ತೆಯು ಪ್ರೇರಿತವಾದುದಾಗಿದೆ, ಮತ್ತು ದೇವರು ಮಾಡಿದ ವಾಗ್ದಾನಗಳು ಯೇಸುವಿನ ಮೂಲಕ ಪರಿಪೂರ್ಣಗೊಳ್ಳುತ್ತವೆ(ನೆರವೇರುತ್ತವೆ).

(ಅ.ಕೃ. 13:32, ಆದಿ 13:14–17, 22:15–18, 2ಸಮು 7:12,16, ಲೂಕ 1:31–33, ಗಲಾ 3:6–9,16,26–29).

## *ದೇವರು ಲೋಕದಮೇಲ್ ಎಷ್ಟೋ ಪ್ರೀತಿಯಿಟ್ಟು.............*

ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯಿಟ್ಟದರಿಂದ ತನ್ನ ಮಗನನ್ನು ಕಳುಹಿಸಿಕೊಟ್ಟನು. ಅಂದರೆ ಮಾನವನಾದ ಯೇಸುವನ್ನು ಈ ಲೋಕವನ್ನು ಪಾಪದಿಂದ ರಕ್ಷಿಸಲು ಕಳುಹಿಸಿದನು. ಯಾರು ಆತನನ್ನು(ಯೇಸುಕ್ರಿಸ್ತನನ್ನು) ನಂಬುತ್ತಾರೋ ಅವರು ನಾಶವಾಗುವುದಿಲ್ಲ ಮತ್ತು ನಿತ್ಯಜೀವವನ್ನು ಪಡೆಯುತ್ತಾರೆ.

(ಮತ್ತಾ 1:20–21, 3:17, ಲೂಕ 1:35, ಯೊಹಾ 3:16).

## *ಕ್ರಿಸ್ತನ ಯಜ್ಞ*

ಯೇಸುಕ್ರಿಸ್ತ ಪಾಪರಹಿತನಾಗಿದ್ದನು. ಆತನು ದೇವರು ನೀವಿವಂತ ಎಂದು ನಿರೂಪಿಸಲು ಮತ್ತು ಯಾರು ನಂಬಿಕೆಯಿಂದ ಆತನನ್ನು ಅಂಗೀಕರಿಸುತ್ತಾರೋ ಅವರನ್ನು ಪಾಪದಿಂದ ಬಿಡುಗಡೆಗೊಳಿಸಲು ತನ್ನನ್ನೇ ಸಜೀವ ಯಜ್ಞವಾಗಿ ಅರ್ಪಿಸಿಕೊಂಡನು. ದೇವರು ಆತನನ್ನು ಮರಣದಿಂದ ಎಬ್ಬಿಸಿ ಪುನರುತ್ಥಾನವನ್ನು ಕೊಟ್ಟನು. ಆತನಿಗೆ ನಿತ್ಯಜೀವವನ್ನು ದಯಪಾಲಿಸಿದನು. ಈಗ ಯೇಸುಕ್ರಿಸ್ತನಿಗೆ ಭೂಲೋಕದ ಮತ್ತು ಪರಲೋಕದ ಎಲ್ಲಾ ಅಧಿಕಾರವನ್ನು ಕೊಟ್ಟಿದ್ದಾನೆ. ಯೇಸುಕ್ರಿಸ್ತ ಮಾನವ ಮತ್ತು ದೇವರ ನಡುವೆ ಮಧ್ಯಸ್ಥಗಾರನಾಗಿ ನೇಮಿಸಲ್ಪಟ್ಟವನಾಗಿದ್ದಾನೆ.

(ರೋಮಾ 3:21–26, ಎಫೆಸ 1:9–23, 1ತಿಮೋ 2:5–6, ಇಬ್ರಿಯ 4:14–16).

## *ಯೇಸುಕ್ರಿಸ್ತನ ಹಿಂತಿರುಗುವಿಕೆ*

ಯೇಸುಕ್ರಿಸ್ತ ಭೂಲೋಕಕ್ಕೆ ಮಹಾಮಹಿಮೆಯಿಂದಲೂ, ಅಧಿಕಾರ ಹೊಂದಿದವನಾಗಿ ಶೀಘ್ರವೇ ಹಿಂತಿರುಗಿ ಬರುತ್ತಾನೆ.

ಅನಂತರ ಕ್ರಿಸ್ತನಲ್ಲಿ ಸತ್ತವರನ್ನು ಮೊದಲು ಎಬ್ಬಿಸುತ್ತಾನೆ, ನ್ಯಾಯತೀರ್ವಿಕೆಯನ್ನು ಮಾಡುತ್ತಾನೆ ಮತ್ತು ಯೇಸುವನ್ನು ನಂಬಿರುವವರಿಗೆ ದೇವರ ರಾಜ್ಯದಲ್ಲಿ ನಿತ್ಯಜೀವವನ್ನು ಕೊಡುತ್ತಾನೆ ಅವರು ಸದಾಕಾಲ ಕ್ರಿಸ್ತನೊಂದಿಗೆ ಆಳುವರು.

(ದಾನಿ 12:2, ಮತ್ತಾ 25:31–34, ಲೂಕ 21:20–32, ಯೋಹಾ 5:28–29, ಅ.ಕೃ.1:11, 2ತಿಮೋ4:1, ಪ್ರಕ22:12).

## *ದೇವರ ರಾಜ್ಯ*

ದೇವರ ರಾಜ್ಯವು ಕ್ರಿಸ್ತನ ಮೂಲಕ ಭೂಲೋಕದಲ್ಲಿ ಶಾಶ್ವತವಾಗಿ ಸ್ಥಾಪನೆಯಾಗುತ್ತದೆ. ಯೇಸುಕ್ರಿಸ್ತ ಯೆರುಸಲೇಮಿನಲ್ಲಿ ರಾಜನಾಗಿ ಆಳ್ವಿಕೆ ನಡೆಸುತ್ತಾನೆ. ಅವನ ರಾಜ್ಯ ಭೂಲೋಕಕ್ಕೆಲ್ಲಾ ವಿಸ್ತರಣೆ ಆಗುತ್ತದೆ ಮತ್ತು ನೀತಿಯಿಂದ ಆಳ್ವಿಕೆಯನ್ನು ನಡೆಸುತ್ತಾನೆ, ದೇವಜನರು ಅದರಲ್ಲಿ ಬಾದ್ಯರಾಗುತ್ತಾರೆ.

(ಕೀರ್ತ 72, ಯೆಶಾಯ 2:2–4, 9:6–7, 11:1–9, 61:1–11, ಯೆರೆ 3:17, ದಾನಿ 2:44, 7:14,27, ಅ.ಕೃ.3:21).

## *ರಕ್ಷಣೆಯ ಮಾರ್ಗ*

ದೇವರ ರಾಜ್ಯದಲ್ಲಿ ಬಾಧ್ಯತೆಹೊಂದಲು ಇರುವ ಏಕೈಕ ಮಾರ್ಗವೆಂದರೆ ಕ್ರಿಸ್ತನಲ್ಲಿ ನಂಬಿಕೆ ಇಡುವುದೇ ಆಗಿದೆ. ಅಂದರೆ ಸತ್ಯವೇದವನ್ನು ನಂಬುವುದು ಮತ್ತು ಅದರಲ್ಲಿ ತಿಳಿಸಿರುವಂತೆ ನಡೆಯುವುದು. ಪುರುಷ ಮತ್ತು ಸ್ತ್ರೀಯರೆಲ್ಲರೂ ತಮ್ಮತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು, ನೀರಿನ ದೀಕ್ಷಾಸ್ನಾನದ ಮೂಲಕ ಯೇಸುಕ್ರಿಸ್ತನ ಮೂಲಕ ದೇವರ ಬಳಿಗೆ ನಂಬಿಕೆಯಿಂದ ಬರುವುದೇ ಆಗಿರುತ್ತದೆ.

(ಮತ್ತಾ 16:24-27, ಮಾರ್ಕ 16:16, ಯೋಹಾ 3:3-5, ಅ.ಕೃ.2:37-38, 4:12, 2ತಿಮೋ3:15, ಇಬ್ರಿ 11:6).

***ಕೆಲವು ಮುಖ್ಯವಾದ ವ್ಯತ್ಯಾಸ ಅಥವಾ ಭಿನ್ನತೆಗಳು:***

ಕೆಲವೊಂದು ಸಾರಿ ಕೆಲವರು ಕೇಳಬಹುದು, ಬೇರೆ ಕ್ರೈಸ್ತ ಗುಂಪುಗಳಿಗಿಂತ ನೀವು ಹೇಗೆ ಭಿನ್ನವಾಗಿದ್ದೀರಿ?

ನಮ್ಮಲ್ಲಿ ಯಾವುದೇ ಪಾದ್ರಿಗಳು ಮತ್ತು ಅಧಿಕಾರಿ ವರ್ಗಗಳಿಲ್ಲ. ನಮ್ಮ ಸಿದ್ಧಾಂತಗಳು ಬೇರೆ ಸಭೆ(ಚರ್ಚು)ಗಳ ಸಿದ್ಧಾಂತಕ್ಕಿಂತ ಭಿನ್ನವಾಗಿವೆ.

ನಾವು ತ್ರೈಯೇಕತ್ವ(ಟ್ರಿನಿಟಿ) ಸಿದ್ಧಾಂತವನ್ನು ತಿರಸ್ಕರಿಸುತ್ತೇವೆ(ಒಪ್ಪಿಕೊಳ್ಳುವುದಿಲ್ಲ). ಏಕಂದರೆ ಈ ಸಿದ್ಧಾಂತವು ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದ ನಂತರ ಹುಟ್ಟಿಕೊಂಡಿರುವುದಾಗಿದೆ. ಸತ್ಯವೇದವು ಯೇಸುಕ್ರಿಸ್ತ "ದೇವರಮಗ" ಎಂದು ಸ್ಪಷ್ಟವಾಗಿ ತಿಳಿಸಿದೆ. ಆದರೆ ಆತ ಮೊದಲೇ ಇದ್ದ, ಮಗನಾದ ದೇವರು ಎಂದು ಎಲ್ಲೂ ತಿಳಿಸಿಲ್ಲ. ದೇವರಿಗೆ ಯಾರನ್ನೂ ಸರಿಸಮ ಮಾಡಲು ಸಾಧ್ಯವಿಲ್ಲ.

ತ್ರೈಯೇಕತ್ವವು ಯೇಸುಕ್ರಿಸ್ತನ ಮಾನವತೆಯು ಕಾರ್ಯಗಳು ಮತ್ತು ಆತನ ಮರಣವನ್ನು ಒಪ್ಪಿಕೊಳ್ಳುವುದಿಲ್ಲ. ಇದು ಸರಿಯಾದುದಲ್ಲ. ಏಕಂದರೆ, ಯೇಸುವೇ ದೇವರಾಗಿದ್ದರೆ, ಆತ ಶೋಧನೆಗೆ ಒಳಬೀಳುತ್ತಿರಲಿಲ್ಲ ಮತ್ತು ಮರಣವನ್ನು ಹೊಂದಲು ಸಾಧ್ಯವಿಲ್ಲ. ಮರಣವಿರುವುದು ಮಾನವನಿಗೆ ಮಾತ್ರ ದೇವರಿಗಲ್ಲ, ಯಾಕಂದರೆ ದೇವರು ಜೀವಸ್ವರೂಪನು.

(1ತಿಮೋ 2:5, 1ಕೊರಿ 11:3, ಇಬ್ರಿಯ 5:8).

ನಾವು ಇನ್ನೊಂದು ಜನಪ್ರಿಯ ಸಿದ್ಧಾಂತವಾದ ಆತ್ಮಕ್ಕೆ ಸಾವಿಲ್ಲ, ಮರಣದ ನಂತರ ಆತ್ಮ ಪರಲೋಕಕ್ಕೆ ಹೋಗುತ್ತದೆ ಎಂಬ ಸಿದ್ಧಾಂತವನ್ನು ತಿರಸ್ಕಾರ ಮಾಡುತ್ತೇವೆ ಮತ್ತು ಒಪ್ಪಿಕೊಳ್ಳುವುದಿಲ್ಲ. ಆದರೆ ಸತ್ಯವೇದದಲ್ಲಿ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, ಯೇಸು ಭೂಲೋಕಕ್ಕೆ ಹಿಂತಿರುಗಿ ಬಂದ ನಂತರ ಆತನು ಪುನರುತ್ಥಾನವನ್ನು ಉಂಟುಮಾಡಿ ನಿತ್ಯಜೀವವನ್ನು ದಯಪಾಲಿಸುತ್ತಾನೆ ಮತ್ತು ದೇವರ ರಾಜ್ಯದಲ್ಲಿ ಶಾಶ್ವತವಾಗಿ ಜೀವಿಸುವಂತೆ ಮಾಡುತ್ತಾನೆ ಎಂದು ತಿಳಿಸಿದೆ.

(ಯೋಹಾ 3:13, ಅ.ಕೃ. 2:34, 1ಥೆಸ 4:16).

ದೀಕ್ಷಾಸ್ನಾನವು ಬಹಳ ಮುಖ್ಯವಾದ ಕಾರ್ಯವಾಗಿದ್ದು ದೇವರಿಂದಲೇ ನೇಮವಾದದ್ದು. ವಯಸ್ಕರು ಮಾತ್ರ ತೆಗೆದುಕೊಳ್ಳಬೇಕು ಎಂದು ನಂಬುತ್ತೇವೆ. ನೀರಿನಲ್ಲಿ ಮುಳುಗಿ ಹೊಸಜೀವಿತೆಯ ಪ್ರಾರಂಭದ ಗುರುತು ಇದಾಗಿದೆ. ಮಕ್ಕಳಿಗೆ ನೀರನ್ನು ಚಿಮುಕಿಸುವ ಕಾರ್ಯ ದಿಕ್ಷಾಸ್ನಾನವಲ್ಲ. ಈ ವಿಷಯವನ್ನು ಸತ್ಯವೇದದಲ್ಲಿ ಎಲ್ಲಿಯೂ ತಿಳಿಸಿರುವುದಿಲ್ಲ.

(ಯೋಹಾ 3:5, ಕೊಲೊ 2:12, 1ಪೇತ್ರ 3:21).

ಸತ್ಯವೇದದಲ್ಲಿ ಪಿಶಾಚ ಅಥವಾ ದೆವ್ವ, ಭೂತ ಎಂಬ ಪದಗಳನ್ನು ಮಾನವನ ಪಾಪ ಕಾರ್ಯಗಳಿಗೆ ಮತ್ತು ಖಾಯಿಲೆಗಳಿಗೆ ಸಾಂಕೇತಿಕವಾಗಿ ಉಪಯೋಗಿಸಲಾಗಿದೆ ಎಂದು ನಂಬುತ್ತೇವೆ.

ನಾವು ಬೇರೆ ಒಂದು ದುಷ್ಟ ಶಕ್ತಿಯಿದೆ ಎಂಬ ವಾದವನ್ನು ತಿರಸ್ಕಾರ ಮಾಡುತ್ತೇವೆ(ಒಪ್ಪಿಕೊಳ್ಳುವುದಿಲ್ಲ).

(ಯೆಶಾ 45:7, ಮಾರ್ಕ 8:33, ಯೊಹಾ 6:70, ಇಬ್ರಿ1:14).

## 2. ನಮ್ಮ ಜೀವದ ಮಾರ್ಗ.

### *ಸತ್ಯವೇದ-ಜೀವನದ ಮಾರ್ಗದರ್ಶಿ ಪುಸ್ತಕ*

ನಮ್ಮ ದೈವೀಕ ಜೀವನವನ್ನು ನಡೆಸಲು ಇರುವ ಏಕೈಕ ಆಧಾರವೆಂದರೆ ಸತ್ಯವೇದ ಆಗಿದೆ. ಕ್ರಿಸ್ಟಡೆಲ್ಫಿಯನ್ನರೆಲ್ಲಾ ಬೆಳೆಸಿಕೊಂಡಿರುವ ಪದ್ದತಿಯೆಂದರೆ ಸತ್ಯವೇದವನ್ನು ಪ್ರತಿದಿನವೂ ಓದುವುದು. ಈ ಓದುವಿಕೆಗೆ ಅನುಗುಣವಾಗಿ ದೈನಂದಿನ ಪಠಣದ ತಃಖ್ತೆಯಿದ್ದು, ಅದರ ಪ್ರಕಾರ ನಾವು ಹಳೆಯ ಒಡಂಬಡಿಕೆಯನ್ನು ವರ್ಷಕ್ಕೆ ಒಂದು ಬಾರಿ ಮತ್ತು ಹೊಸ ಒಡಂಬಡಿಕೆಯನ್ನು ವರ್ಷಕ್ಕೆ ಎರಡುಬಾರಿ ಓದಬಹುದಾಗಿರುತ್ತದೆ. ಹಲವರು ಇದಕ್ಕಿಂತ ಹೆಚ್ಚು ಬಾರಿ ಕೂಡ ಓದುತ್ತಾರೆ.

(ರೋಮಾ 15:4, 1ಥೆಸ 2:13, ಯಾಕೋ 1:22, 2ತಿಮೋ 2:15).

### *ಪ್ರಾರ್ಥನೆ*

ನಾವು ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವಂತೆ ಮತ್ತು ಯೇಸುಕ್ರಿಸ್ತ ನಮಗೆ ಕೊಟ್ಟಿರುವ ಆಜ್ಞೆಯಂತೆ, ಪರಲೋಕದಲ್ಲಿರುವ ನಮ್ಮ ತಂದೆಯಾದ ದೇವರಿಗೆ, ಆತನ ಮಗನಾದ ಯೇಸುವಿನ ಹೆಸರಿನ ಮೂಲಕ ಪ್ರಾರ್ಥನೆಯನ್ನು ಮಾಡುತ್ತೇವೆ. ನೇರವಾಗಿ ಯೆಸುವಿಗೆ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕಿಂತ ಮುಖ್ಯವಾಗಿ ಯೇಸುವಿನ ಮೂಲಕ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತೇವೆ. ಆದರೆ ಹಾಗೆಂದ ಮಾತ್ರಕ್ಕೆ ಯೇಸುವಿಗೆ ನಮ್ಮ ವೈಯುಕ್ತಿಕ ವಿಷಯಗಳನ್ನು ಪ್ರಾರ್ಥನೆಯ ಮೂಲಕ ಸಮರ್ಪಿಸಬಾರದು ಎಂಬುದು ನಮ್ಮ ಸಿದ್ಧಾಂತವಲ್ಲ. ನಾವು ಬೇಡುವುದೆಲ್ಲವನ್ನು ಆತನು ಮೊದಲೇ ತಿಳಿದವನಾಗಿರುವವನಾಗಿದ್ದಾನೆ.

(ಯೋಹಾನ 5:16, 16:26, ಇಬ್ರಿಯ 2:15).

## ಕಾರ್ಯಗಳು

ಕ್ರಿಸ್ಟಡೆಲ್ಫಿಯನ್ನರು ಅಪೋಸ್ತಲರ ಬೋಧನೆಗಳು ಮತ್ತು ಅಪೋಸ್ತಲನಾದ ಪೌಲನ ಬೋಧನೆಗಳನ್ನು ಮಾದರಿಯಾಗಿ ತೆಗೆದುಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಮಾಡುವವರಾಗಿದ್ದಾರೆ. ತಮಗೆ ಮತ್ತು ತಮ್ಮಗಳ ಮನೆಯವರಿಗೆ ನಿಷ್ಠೆಯಿಂದಿದ್ದು ಕೆಲಸಗಳನ್ನು ಮಾಡುವವರಾಗಿದ್ದಾರೆ. ಆದರೆ ಕೆಲವು ಕಾರ್ಯಗಳನ್ನು(ರಾಜಕೀಯ, ಸೈನಿಕ ಕೆಲಸ, ಪೋಲೀಸ್ ಇಲಾಖೆ, ಅಪರಾಧ ಕೆಲಸಗಳು) ಮಾಡುವುದಿಲ್ಲ.

(1ತಿಮೋ 5:8, 2ಥೆಸ 3:6–12).

## ಕೌಟುಂಬಿಕ, ಸಾಂಸಾರಿಕ ಜೀವನ

ಗಂಡ ಹೆಂಡತಿಯ ಸಂಬಂಧ ಯೇಸುಕ್ರಿಸ್ತ ಮತ್ತು ಸಭೆಯಷ್ಟೇ ಪವಿತ್ರವಾದುದಾಗಿರುತ್ತದೆ. ಆದ್ದರಿಂದ ಮದುವೆಯನ್ನು ಅತ್ಯಂತ ಪವಿತ್ರವಾದದ್ದು ಎಂದು ಭಾವಿಸುತ್ತೇವೆ. ಮಕ್ಕಳಿಗೆ ದೇವರ ತಿಳುವಳಿಕೆಯನ್ನು ಕೊಡಬೇಕು ಮತ್ತು ನಿತ್ಯವೂ ಸತ್ಯವೇದವನ್ನು ಓದುವಂತೆ ಮಾಡುವುದು ಮತ್ತು ಸತ್ಯಮಾರ್ಗದಲ್ಲಿ ನಡೆಸಲು ಕಲಿಸುವುದು ತಂದೆ ತಾಯಿಗಳ ಜವಾಬ್ದಾರಿಯಾಗಿರುತ್ತದೆ. ಮನೆಯ ಹಿರಿಯರು ಕುಟುಂಬದವರೆಲ್ಲರ ಮೇಲೆ ಜವಾಬ್ದಾರಿಯನ್ನು ಹೊಂದಿರುತ್ತಾರೆ ಮತ್ತು ಸಹೋದರತ್ವದಲ್ಲಿ ನಡೆಸುತ್ತಾರೆ.

(ಎಫೆಸ 5:22–23, 6:4, 1ತಿಮೋ 5:4).

## ಕಾಣಿಕೆಗಳು

ಕ್ರಿಸ್ತಡೆಲ್ಫಿಯನ್ನರು ವೈಯುಕ್ತಿಕವಾಗಿ ಮತ್ತು ಗುಂಪುಗಳಾಗಿಯೂ ಸಹ ಕಾಣಿಕೆಗಳನ್ನು ಅಗತ್ಯ ಕಾರ್ಯಗಳಿಗೆ ಕೊಡುವವರಾಗಿದ್ದಾರೆ. ಆದರೆ ಈ ಕಾರ್ಯಗಳು ಮಾನವರು ನೋಡುವಂತೆ ಅಥವಾ ತಿಳಿಯುವಂತೆ ಮಾಡುವ ಕಾರ್ಯಗಳಲ್ಲ. ಈ ಪರೋಪಕಾರ್ಯಗಳನ್ನು ಮತ್ತು ಸುವಾರ್ತೆ ಸಾರುವಿಕೆ ಕಾರ್ಯಗಳನ್ನು ಜೊತೆಯಾಗಿ ಮಾಡುವುದಿಲ್ಲ, ಕಾರಣ ಕ್ರಿಸ್ತನಡೆಗೆ ಬರುವ ಜನರು ತಪ್ಪಾದ ರೀತಿಯಲ್ಲಿ ಬಂದು ಈ ಕಾರ್ಯವನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಗಳು ಅಧಿಕವಾಗಿರುತ್ತವೆ.

(ಗಲಾ 6:10, ಯಾಕೋ 1:27, 2:15–16, ಮತ್ತಾ 6:1–4, ಯೋಹಾ 6:26).

ನಾವು ದಶಮಭಾಗ(ಆದಾಯದ ಶೇ.10)ವನ್ನು ಸಭೆಗೆ ನೀಡುವುದಿಲ್ಲ. ಏಕಂದರೆ ಹಳೆಯ ಒಡಂಬಡಿಕೆ ಕಾಲದಲ್ಲಿ ದಶಮಭಾಗ ಲೇವಿಯರ ಯಾಜಕ ಜೀವನಕ್ಕೆ ಕೊಟ್ಟಿರುವುದಾಗಿತ್ತು. ಆದರೆ ಈ ನಿಯಮ ಯೇಸುವಿನ ಮೂಲಕ ತೆಗೆದುಹಾಕಲ್ಪಟ್ಟಿದೆ.

(ಅರಣ್ಯ ಕಾಂಡ 18:24, ಇಬ್ರಿಯ 7:1–28).

## ಶಾರೀರಿಕ ಮತ್ತು ಆತ್ಮೀಕ ಜೀವಿತ.

ದೀಕ್ಷಾಸ್ನಾನವು ನಮ್ಮ ಜೀವನದ ಬದಲಾವಣೆಯ ಸಂಕೇತವಾಗಿದೆ. ನಾವು ಲೋಕದ ಪಾಲಿಗೆ ಸತ್ತವರಾಗಿ ಯೇಸುವಿನವರಾಗಿ ಆತ್ಮೀಕವಾಗಿ ಹೊಸ ಜೀವಿತವನ್ನು ತೋರಿಸುವ ಸಂಕೇತವಾಗಿದೆ. ಹಾಗೆಂದಮಾತ್ರಕ್ಕೆ ನಮಗೆ ಯಾವುದೋ ಅತಿಮಾನವೀಯ ಶಕ್ತಿಯಿದೆ ಎಂದು ಅರ್ಥವಲ್ಲ, ಆದರೆ ನಾವು ದೇವರನ್ನು ಅಂಗೀಕರಿಸುವುದರ ಮೂಲಕ ಆತನ ವಾಕ್ಯಗಳ ಮುಖಾಂತರ ಆತನ ಆಜ್ಞೆಗಳಿಗೆ ಒಳಪಟ್ಟು ಹೊಸದಾಗಿ

ಜೀವಿಸುವುದೇ ಆತ್ಮೀಕ ಜೀವಿತವಾಗಿದೆ.
(ರೋಮಾ 6:1-4, ಮಾರ್ಕ14:38, ಗಲಾ5:22-25).

## *ನಂಬಿಕೆ ಮತ್ತು ಕೃಪೆ*

ನಾವು ಸಂಪೂರ್ಣವಾಗಿ ದೇವರನ್ನು ಆಶ್ರಯಿಸಲು ಪ್ರಯತ್ನಿಸುತ್ತೇವೆ, ಮತ್ತು ಆತನ ಕೃಪೆಯನ್ನು ಪಡೆಯಲು ಪ್ರಾರ್ಥನೆಗಳ ಮೂಲಕ ಮತ್ತು ಒಳ್ಳೆಯ ಕಾರ್ಯಗಳನ್ನು ನಂಬಿಕೆಯ ಮೂಲಕವಾಗಿ ಮಾಡುವುದರಿಂದ ಪಡೆಯಬಹುದಾಗಿದೆ. ಅದೇರೀತಿ ರಕ್ಷಣೆಯು ದೇವರ ಕೃಪೆಯ ಮೂಲಕ ಉಂಟಾಗುತ್ತದೆ ಎಂದು ನಂಬುತ್ತೇವೆ. (ಎಫೆಸ 2:8)

ದೇವರ ಸಹಾಯದಿಂದ ನಾವು ವಿಧೇಯತೆಯನ್ನು ಪಡೆಯಬಹುದಾಗಿದೆ. ಜೊತೆಗೆ ನಾವು ದಿನನಿತ್ಯವೂ ಪ್ರಾರ್ಥನೆ ಮಾಡುವುದರ ಮುಖಾಂತರ, ಹೇಗೆ ಕ್ರಿಸ್ತನು ತಂದೆಯಾದ ದೇವರಿಗೆ ಸಂಪೂರ್ಣವಾಗಿ ವಿಧೇಯನಾಗಿದ್ದನೋ, ಅದೇ ರೀತಿ ನಡೆಯಲು ಸಹಕಾರಿಯಾಗುತ್ತದೆ. ಹಾಗಾಗಿ ನಾವು ನಮ್ಮ ಕಾರ್ಯಗಳಲ್ಲಿ ತಾಳ್ಮೆಯುಳ್ಳವರಾಗಿರಬೇಕು, ಕೌಟುಂಬಿಕ ಜೀವನಕ್ಕೆ ಬದ್ಧವಾಗಿರಬೇಕು, ಕೊಡುವುದರಲ್ಲಿ ಪ್ರೀತಿಯಿರಬೇಕು, ಸುವಾರ್ತೆ ಸಾರುವುದರಲ್ಲಿ ಸಮರ್ಪಣಾ ಮನೋಭಾವ ಇರಬೇಕು ಮತ್ತು ದೇವರಲ್ಲಿ ಸಂತೋಷವುಳ್ಳವರಾಗಿರಬೇಕು.

# 3. ನಮ್ಮ ಅನ್ಯೋನ್ಯತೆ, ಆರಾಧನೆ ಮತ್ತು ಸಾಕ್ಷಿ

*ಸಭೆಯಾಗಿ ಸೇರುವುದು.*

ವಾರಕ್ಕೆ ಒಂದು ಬಾರಿ ಸಭೆಯವರೆಲ್ಲರೂ ದೇವರ ಆರಾಧನೆಗಾಗಿ ಮತ್ತು ಯೇಸುಕ್ರಿಸ್ತನ ಯಜ್ಞಾರ್ಪಣೆಯನ್ನು ನೆನಪಿಸುವ ನೆನಪಿನ ಕಾರ್ಯಚರಣೆಯನ್ನು ಮಾಡಲು ಸಭೆಯಾಗಿ ಸೇರುತ್ತೇವೆ(ರೊಟ್ಟಿ ಮುರಿಯುವುದು ಮತ್ತು ದ್ರಾಕ್ಷಾರಸದಲ್ಲಿ ಪಾಲು ತೆಗೆದುಕೊಳ್ಳುವುದು). ಎಲ್ಲಾ ದೀಕ್ಷಾಸ್ನಾನ ಹೊಂದಿದ ಸದಸ್ಯರು ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಪಾಲು ತೆಗೆದುಕೊಳ್ಳುತ್ತಾರೆ.

ಈ ರೊಟ್ಟಿ ಮತ್ತು ದ್ರಾಕ್ಷಾರಸ ತೆಗೆದುಕೊಳ್ಳುವ ಕಾರ್ಯವಲ್ಲದೆ, ವಾರದ ಸಭೆಯಲ್ಲಿ ಪ್ರಾರ್ಥನೆ, ಸತ್ಯವೇದದಲ್ಲಿ ಎರಡು ಅಥವಾ ಮೂರು ಅಧ್ಯಾಯಗಳ ಪಾರಾಯಣ, ಕೆಲವು ಸಂಗೀತ ಹಾಡುವುದು, ಮತ್ತು ಒಬ್ಬ ಸಹೋದರರಿಂದ "ಎಚ್ಚರಿಕೆಮಾತು"(ಸತ್ಯವೇದದ ಆಧಾರದಿಂದ ನಮ್ಮನ್ನು ಧೈರ್ಯಗೊಳಿಸುವ ವಾಕ್ಯಗಳು) ಇರುತ್ತದೆ. ಪ್ರತಿ ವಾರವೂ ಒಬ್ಬೊಬ್ಬ ಸಹೋದರರು ಎಚ್ಚರಿಕೆ ಮಾತು ತಿಳಿಸುತ್ತಾರೆ.

(ಎಫೆ 5:19, 1ತಿಮೊ 4:13, ಇಬ್ರಿ 3:13).

ಈ ಸಭೆಯಲ್ಲಿ ಬಾಗವಹಿಸುವುದು ನಮ್ಮ ಕ್ರಿಸ್ತೀಯ ಜೀವಿತದಲ್ಲಿ ಬಹು ಮುಖ್ಯವಾದ ಭಾಗವಾಗಿದೆ. ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿ ಈ ಕಾರ್ಯವು ಭಾನುವಾರಗಳಲ್ಲಿ ನಡೆಯುತ್ತದೆ. ಆದರೆ ಕೆಲವೊಂದು ದೇಶಗಳಲ್ಲಿ ಭಾನುವಾರ ಸಾರ್ವತ್ರಿಕ ರಜೆ ಇಲ್ಲದಿರುವುದರಿಂದ ಬೇರೆ ದಿನ ನಡೆಯುತ್ತದೆ

(ಉದಾ:-ನೇಪಾಳದಲ್ಲಿ ಶನಿವಾರ ಮತ್ತು ಬಾಂಗ್ಲಾದೇಶದಲ್ಲಿ ಶುಕ್ರವಾರ). ಮಕ್ಕಳಿಗಾಗಿ ಭಾನುವಾರ ಶಾಲೆಗಳ ಮೂಲಕ ಸತ್ಯವೇದದ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ.

(ಅ.ಕೃ. 2:42, 20:7, 1ಕೊರಿ 16:2).

ಹಲವಾರು ಸಭೆಗಳಲ್ಲಿ ಸ್ಥಳೀಯವಾಗಿ ವಾರದ ಮಧ್ಯದಲ್ಲಿ ಒಂದು ದಿನವನ್ನು ನಿಗಧಿಮಾಡಿಕೊಂಡು ಆ ದಿನದ ಸಾಯಂಕಾಲಗಳಲ್ಲಿ ಸತ್ಯವೇದದ ಅಧ್ಯಯನ ಕೂಟ ನಡೆಸುತ್ತಾರೆ. ಜೊತೆಗೆ ಯುವಜನರಿಗೆ ಯುವಜನ ಕೂಟ ನಡೆಸಿ ಸತ್ಯವೇದದಲ್ಲಿ ಹೆಚ್ಚು ತಿಳಿವಳಿಕೆ ಪಡೆಯುವಂತೆ ಮಾಡುತ್ತಾರೆ.

## *ಸತ್ಯವೇದ ಶಾಲೆಗಳು*

ಕ್ರಿಸ್ಟಡೆಲ್ಫಿಯನ್ನರು ಯಾವುದೇ ಥಿಯೋಲಾಜಿಕಲ್ ಶಾಲೆಗಳನ್ನಾಗಲೀ, ಅಥವಾ ಸೆಮಿನಾರುಗಳನ್ನಾಗಲೀ ಹೊಂದಿರುವುದಿಲ್ಲ. ಆದಕ್ಕೆ ಬದಲಾಗಿ ಸತ್ಯವೇದ ಶಾಲೆಗಳು ಎಲ್ಲಾ ಸದಸ್ಯರಿಗಾಗಿ ಇದೆ. ಪ್ರತಿ ವರ್ಷ ಒಂದು ವಾರ ಅಥವಾ ವಾರಾಂತ್ಯದಲ್ಲಿ ಸತ್ಯವೇದ ಅಧ್ಯಯನ ಕೂಟವನ್ನು ಬಾಡಿಗೆ ಪಡೆದ ಶಾಲಾ ಸ್ಥಳಗಳಲ್ಲಿ ಅಥವಾ ಬಾಡಿಗೆ ಪಡೆದ ಚರ್ಚುಗಳ ಕೊಠಡಿಗಳಲ್ಲಿ ನಡೆಸುತ್ತೇವೆ.

ಅಂತಹ ಶಾಲೆಗಳಲ್ಲಿ ಸಾಮಾನ್ಯವಾಗಿ ಇಬ್ಬರು ಅಥವಾ ಮೂವರು ಸಹೋದರರು ಸತ್ಯವೇದದ ವಿವಿಧ ಪುಸ್ತಕಗಳ ಬಗ್ಗೆ ಅಧ್ಯಯನವನ್ನು ನಡಿಸಿಕೊಡುತ್ತಾರೆ.

## *ಸಂಘಟನೆ*

ಪ್ರತಿ "ಸಭೆ"ಯನ್ನು ಅಲ್ಲಿನ ಸಹೋದರರೇ ನೋಡಿಕೊಳ್ಳುತ್ತಾರೆ. ಯಾವುದೇ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮುಂದಾಳತ್ವ ಅಥವಾ ಕೇಂದ್ರೀಯ ಕಛೇರಿಗಳು

ಕ್ರಿಸ್ಟಡೆಲ್ಫಿಯನ್ನರಲ್ಲಿ ಇರುವುದಿಲ್ಲ. ಆದರೆ ಕ್ರಿಸ್ಟಡೆಲ್ಫಿಯನ್ನರು ಅನ್ಯೋನ್ಯತೆಯನ್ನು ಪ್ರಪಂಚದಾದ್ಯಂತ ಒಂದೇ ನಂಬಿಕೆಯ ಮೂಲಕ ಹೊಂದಿದ್ದಾರೆ. ಬೇರೆಯ ಚರ್ಚುಗಳ ರೀತಿ ಯಾವುದೇ ಅಧಿಕಾರ, ಅಂತಸ್ತುಗಳಿಲ್ಲ, ಈ ಮಾದರಿಗೆ ಹೊಸ ಒಡಂಬಡಿಕೆಯೇ ಆಧಾರವಾಗಿದೆ.

(ಎಫೆ 3:15, 4:1–6, 1ಯೋಹಾ 1:6–7).

ಯೆರುಸಲೇಮಿನ ಮೂಲ ಸಭೆ ಹನ್ನೆರಡು ಜನ ಹಿರಿಯರ ಜವಾಬ್ದಾರಿಯಲ್ಲಿತ್ತು. ಅವರುಗಳು ಸುವಾರ್ತೆಯನ್ನು ಸಾರುವ ಕೆಲಸ ಮತ್ತು ಬೋಧನೆಕಾರ್ಯ ನೋಡಿ ಕೊಳ್ಳುತ್ತಿದ್ದರು. ಅಲ್ಲದೆ ಮತ್ತೆ ಏಳು ಜನ ಸಹಾಕರನ್ನು ಇತರೆ ಲೌಕೀಕ ಕಾರ್ಯಗಳನ್ನು ನಡೆಸಲು ನೇಮಿಸಲಾಗಿತ್ತು. ಅಂತೆಯೇ ಎಫೆಸ ಸಭೆಯಲ್ಲಿ ಕೂಡ ಅನೇಕ ಹಿರಿಯರಿದ್ದರು. ಆದರೆ ಇಂದಿನ ಬೇರೆಬೇರೆ ಚರ್ಚುಗಳಲ್ಲಿ ಪಾದ್ರಿಗಳನ್ನು ನೇಮಕ ಮಾಡಿಕೊಳ್ಳುವುದು ಸತ್ಯಕ್ಕೆ ವಿರುದ್ಧವಾದ ಕೆಲಸವಾಗಿದೆ.

(ಮತ್ತಾ 23:8–11, ಅ.ಕೃ. 1:23–26, 6:1–6, 20:28).

## *ಸುವಾರ್ತೆ ಸಾರುವಿಕೆ*

ಪ್ರತಿ ಸಭೆಯು ಯೇಸುವಿನ ಹೆಸರಿನಲ್ಲಿ ದೇವರ ರಾಜ್ಯದ ಸುವಾರ್ತೆಯನ್ನು ಸಾರಲು ಪ್ರಯತ್ನ ಮಾಡುತ್ತಿರುತ್ತಾರೆ, ಮತ್ತು ತಮ್ಮಗಳ ಸ್ಥಳೀಯ ಪ್ರದೇಶದಲ್ಲಿ ಸುವಾರ್ತೆಯ ವಿಷಯವಾಗಿ ಬೋಧನೆ ಮಾಡುತ್ತಾರೆ.

(ಅ.ಕೃ. 8:12, 28:31, 1ತಿಮೋ 4:2).

ಕೆಲವು ಸಹೋದರರು ಬೇರೆಬೇರೆ ದೇಶಗಳಿಗೆ ಕೂಡ ಹೋಗಿ ಸುವಾರ್ತೆಯನ್ನು ಸಾರುತ್ತಾರೆ, ಮತ್ತು ಆ ದೇಶದ

ಸಹೋದರ ಸಹೋದರಿಯರನ್ನು ಬಲಪಡಿಸಿ ಧೈರ್ಯಗೊಳಿಸುತ್ತಾರೆ. ಸ್ವ ಇಚ್ಛೆಯಿಂದ ಸುವಾರ್ತೆಯನ್ನು ಯಾವುದೇ ಸಂಭಾವನೆ ಇಲ್ಲದೆ ಈ ಕಾರ್ಯ ಮಾಡುತ್ತಾರೆ.

(ಅ.ಕೃ. 20:33–34, 1ಥೆಸ 2:9).

ಕ್ರಿಸ್ಟಡೆಲ್ಫಿಯನ್ನರು ಹಲವಾರು ಸತ್ಯವೇದ ಅಧ್ಯಯನ ಕೂಟಗಳನ್ನು ಅನೇಕ ದೇಶಗಳಲ್ಲಿ ನಡೆಸುತ್ತಾರೆ, ಮತ್ತು ಸತ್ಯವೇದ ಆಧಾರಿತ ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು ಉಚಿತವಾಗಿ ನೀಡುತ್ತಾರೆ. ಹೇಗೆ ಪೌಲನು ಸುವಾರ್ತೆಯನ್ನು ಉಚಿತಾರ್ಥವಾಗಿ ಸಾರಿದನೋ ಅದೇರೀತಿ ಉಚಿತವಾಗಿ ನೀಡುತ್ತಾರೆ.

(1ಕೊರಿ 9:18).

## -:ಒಂದು ಆಹ್ವಾನ:-

ಕ್ರಿಸ್ಟಡೆಲ್ಫಿಯನ್ನರು ದೇವರ ಸೇವೆಗಳಿಂದ ಹೆಣೆಯಲ್ಪಟ್ಟಿರುವಂತಹ ಸಮೂಹವಾಗಿದೆ. ನೀವು ಇವರ ವಿಷಯವಾಗಿ ಇನ್ನೂ ಹೆಚ್ಚು ತಿಳಿಯಬೇಕಾದರೆ, ದಯವಿಟ್ಟು ಈ ಪುಸ್ತಕ ರಕ್ಷಾಪುಟದಲ್ಲಿ ನೀಡಿರುವ ವಿಳಾಸವನ್ನು ಸಂಪರ್ಕಿಸಬಹುದು.

–ರಾಬ್ ಹೈಂಡ್ಮನ್.

ಈ ಸಣ್ಣ ಪುಸ್ತಕದಲ್ಲಿ ಸಹೋದರ ರಾಬ್ ಹೈಂಡ್ಮನ್ ರವರು ಪ್ರಪಂಚದಾದ್ಯಂತ ವ್ಯಾಪಿಸಿರುವ ಕ್ರಿಸ್ತಡೆಲ್ಫಿಯನ್ನರ ಸಹೋದರತ್ವವನ್ನು ಸರಳವಾಗಿ ವಿವರಿಸಿದ್ದಾರೆ. ಪ್ರತಿಯೊಂದು ವಿಭಾಗವು ಕೂಡ ಸತ್ಯವೇದ ಆಧಾರಿತ ವಚನಗಳಿಂದ ಕೂಡಿದೆ. ದಯವಿಟ್ಟು ಆಧಾರಿತ ವಾಕ್ಯಗಳನ್ನು ನಿಮ್ಮ ಸತ್ಯವೇದದಲ್ಲಿ ಪರಾಮರ್ಷಿಸಿ.

ಈ ಪುಸ್ತಕವು ಕೆಳಕಂಡ ವಿಭಾಗಗಳನ್ನು ಒಳಗೊಂಡಿದೆ:

1. ನಮ್ಮ ನಂಬಿಕೆಗಳು.
2. ನಮ್ಮ ಜೀವದ ಮಾರ್ಗ.
3. ನಮ್ಮ ಅನ್ಯೋನ್ಯತೆ, ಆರಾಧನೆ ಮತ್ತು ಸಾಕ್ಷಿ.

The Christadelphians - Kannada
1500 Copies - 2008

ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 63, ಮಂಡ್ಯ - 571 401

ಅಥವ

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್
ಬೆಂಗಳೂರು - 560 005

Elsewhere:

**Printland Publishers, GPO Box 159,
Hyderabad A.P. 500001, INDIA**